<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ</u>
<u>ಹೊಸನಗರ</u>

ಉಪಸ್ಥಿತರುಃ **ಶ್ರೀ. ಮಾರುತಿ ಆರ್. ಶಿಂಧೆ,** ಬಿ.ಎ., ಎಲ್‌ಎಲ್.ಬಿ.,
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ಹೊಸನಗರ.

**ದಿನಾಂಕ : 04 ನೇ ದಿವಸ ಜೂನ್ 2026 ನೇ ಇಸವಿ**

<u>ಸಿ.ಸಿ ಸಂಖ್ಯೆ: **56/2019**</u>

ಫಿರ್ಯಾದಿ : ನಗರ ಪೋಲೀಸ್ ಠಾಣೆ
(ಪ್ರತಿನಿಧಿಸುವವರು : ಮಾನ್ಯ ಸ.ಸ.ಅ)

ವಿರುದ್ಧ

ಆರೋಪಿತರು : 1) ಶ್ರೀ ಕೆ.ಆರ್. ಕೃಷ್ಣಮೂರ್ತಿ ಬಿನ್ ರಾಮಪ್ಪಗೌಡ,
ವಯಸ್ಸುಃ 52 ವರ್ಷ, ಉಃ ವ್ಯವಸಾಯ,
ವಾಸಃ ಕೌರಿ, ರಾವೆ ಗ್ರಾಮ,
ನಗರ ಹೋಬಳಿ, ಹೊಸನಗರ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ.

2) ಶ್ರೀ ಕೆ.ಆರ್. ಡಾಕಪ್ಪಗೌಡ ಬಿನ್ ರಾಮಪ್ಪಗೌಡ,
ವಯಸ್ಸುಃ 50 ವರ್ಷ, ಉಃ ವ್ಯವಸಾಯ,
ವಾಸಃ ಕೌರಿ, ರಾವೆ ಗ್ರಾಮ,
ನಗರ ಹೋಬಳಿ, ಹೊಸನಗರ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ.

(ಪ್ರತಿನಿಧಿಸುವವರುಃ ಆರೋಪಿಗಳ ಪರವಾಗಿ
ಶ್ರೀ.ಡಿ.ಎನ್.ಹಿರಿಯಪ್ಪ, ವಕೀಲರು)

| | |
|---|---|
| ಮಾಹಿತಿದಾರರ ಹೆಸರು | : ಶ್ರೀ ಮಂಜಪ್ಪ |
| ಆರೋಪಿಸಲ್ಪಟ್ಟ ಆಪಾದನೆ | : ಭಾರತ ದಂಡ ಸಂಹಿತೆಯ ಕಲಂ. 504, 324, 323, 506 ಸಹಕಲಂ 34 ರಡಿ |
| ಆರೋಪದ ದಿನಾಂಕ | : 19.11.2018 |
| ಠಾಣೆಯಲ್ಲಿ ವರ್ತಮಾನ ಸ್ವೀಕರಿಸಿದ ದಿನಾಂಕ | : 19.11.2018 |
| ಸಾಕ್ಷ್ಯ ಪ್ರಾರಂಭವಾದ ದಿನಾಂಕ | : 24.01.2023 |
| ಸಾಕ್ಷ್ಯ ಮುಕ್ತಾಯವಾದ ದಿನಾಂಕ | : 24.01.2026 |
| ತೀರ್ಪು ಘೋಷಿಸಿದ ದಿನಾಂಕ | : 04.06.2026 |
| ನ್ಯಾಯಾಧೀಶರ ನಿರ್ಣಯ | : ಆರೋಪಿಗಳ ವಿರುದ್ಧ ಆರೋಪ ಸಾಬೀತಾಗಿಲ್ಲ. |

## ತೀರ್ಪು

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ, ನಗರ ಪೋಲೀಸ್ ಠಾಣಾ ತನಿಖಾಧಿಕಾರಿಯವರು ಭಾರತ ದಂಡ ಸಂಹಿತೆಯ ಕಲಂ.504, 324, 323, 506 ಸಹಕಲಂ 34 ರಡಿ ಪ್ರಕರಣ ದಾಖಲಿಸಿ ಆರೋಪಿಗಳ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

2. <u>ಅಭಿಯೋಜನ ಪ್ರಕರಣದ ಸಂಕ್ಷಿಪ್ತ ವಿವರಣೆ</u>

ದಿನಾಂಕಃ 19.11.2018 ರಂದು ಮಧ್ಯಾಹ್ನ 2-00 ಗಂಟೆಯ ಸಮಯದಲ್ಲಿ ನಗರ ಪೊಲೀಸ್ ಠಾಣಾ ಸರಹದಾದ ಹೊಸನಗರ ತಾಲ್ಲೂಕು, ನಗರ ಹೋಬಳಿ, ರಾವೆ ಗ್ರಾಮ ಮಜಿರೆ ಕೌರಿಯ ಚಾಸಾ.1 ರವರ ಮನೆಯ ಮೇಲಾಗದ ಪಂಚಾಯ್ತಿ ರಸ್ತೆಯ ಪಕ್ಕದಲ್ಲಿರುವ ಜಮೀನಿಗೆ ಚಾಸಾ.1 ರವರು ಬೇಲಿ ಕಟ್ಟುತ್ತಿರುವಾಗ ಆರೋಪಿತರುಗಳು ಚಾಸಾ.1 ರವರಿಗೆ ಹೊಡೆಯಬೇಕೆಂಬ ಸಮಾನ ಉದ್ದೇಶದಿಂದ ಚಾಸಾ.1 ರವರ ಹತ್ತಿರ ಬಂದು ಚಾಸಾ.1 ರವರನ್ನು ಉದ್ದೇಶಿಸಿ ಏನೋ ಸೂಳೇಮಗನೆ ಬೋಳಿಮಗನೇ, ನಿನ್ನ ಮನೆಗೆ ರಸ್ತೆ ಬೇಕೇನೋ ಎಂದು ಅವಾಚ್ಯ ಶಬ್ದಗಳಿಂದ ಬೈದು, 1 ನೇ ಆರೋಪಿಯವರು ತನ್ನ ಕೈಯಲ್ಲಿದ್ದ ಕಬ್ಬಿಣದ ಕತ್ತಿಯಿಂದ ಚಾಸಾ.1 ರವರ ಎಡಗೈಗೆ ಹೊಡೆದು ರಕ್ತ ಗಾಯಪಡಿಸಿರುವುದು. ಚಾಸಾ.1 ರವರು ನೋವು ತಡೆಯಲಾಗದೆ ನೆಲಕ್ಕೆ ಬಿದ್ದಾಗ 2 ನೇ ಆರೋಪಿಯವರು ದೊಣ್ಣೆಯಿಂದ ಚಾಸಾ.1 ರವರ ಬೆನ್ನು ಮತ್ತು ಮೈ ಕೈಗೆ ಹೊಡೆದಿರುವುದು. ಆರೋಪಿತರಿಬ್ಬರೂ ಕೈಗಳಿಂದ ಚಾಸಾ.1 ರವರ ಮೈ-ಕೈಗೆ ಗುದ್ದಿ ಸಾಮಾನ್ಯ ಸ್ವರೂಪದ ರಕ್ತಗಾಯ ಪಡಿಸಿರುವುದು, ಆರೋಪಿತರು ಚಾಸಾ.1 ರವರನ್ನು ಉದ್ದೇಶಿಸಿ ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲವೆಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದು ದೂರನ್ನು ದಾಖಲಿಸಿರುತ್ತಾರೆ.

3. ಫಿರ್ಯಾದಿಯವರು ನೀಡಿದ ದೂರು ಸ್ವೀಕರಿಸಿ, ಪ್ರಕರಣ ದಾಖಲಿಸಿಕೊಂಡು ನಗರ ಪೊಲೀಸ್ ಠಾಣೆಯ ತನಿಖಾಧಿಕಾರಿಯು

ತನಿಖೆಯನ್ನು ನಡೆಸಿ ಆರೋಪಿಗಳ ವಿರುದ್ಧ ಭಾರತ ದಂಡ ಸಂಹಿತೆಯ ಕಲಂ.504, 324, 323, 506 ಸಹಕಲಂ 34 ರಡಿ ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ.

4. ಆರೋಪಿಗಳು ತಮ್ಮ ನ್ಯಾಯಾವಾದಿಯ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದು, ಅವರಿಗೆ ಅಂತಿಮ ವರದಿ ಮತ್ತು ಅದರ ಎಲ್ಲಾ ಪೂರಕ ದಾಖಲೆಗಳನ್ನು ಒದಗಿಸುವ ಮೂಲಕ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 207 ನ್ನು ಅನುಸರಿಸಲಾಗಿದೆ.

5. ದೋಷಾರೋಪಣೆಯನ್ನು ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳಿಗೆ ದೋಷಾರೋಪಣೆಯನ್ನು ಓದಿ ತಿಳಿಸಿದ ನಂತರ ಆರೋಪಿಗಳು ನಿರಾಕರಿಸಿದ್ದು, ವಿಚಾರಣೆಯಾಗಲಿ ಎಂದು ಕೋರಿರುತ್ತಾರೆ.

6. ಆರೋಪಿಗಳ ವಿರುದ್ಧ ಸಲ್ಲಿಸಿರುವ ಪ್ರಕರಣವನ್ನು ರುಜುವಾತುಪಡಿಸುವ ಉದ್ದೇಶದಿಂದ ಅಭಿಯೋಜಕರು ಒಟ್ಟು 12 ಸಾಕ್ಷಿದಾರರಲ್ಲಿ, 11 ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುತ್ತಾರೆ. ಚಾಸಾ.1 ರವರನ್ನು ಫ್ರಾಸಾ.1 ಎಂದು, ಚಾಸಾ.2 ರವರನ್ನು ಫ್ರಾಸಾ.2 ಎಂದು, ಚಾಸಾ.3 ರವರನ್ನು ಫ್ರಾಸಾ.3 ಎಂದು, ಚಾಸಾ.4 ರವರನ್ನು ಫ್ರಾಸಾ.4 ಎಂದು, ಚಾಸಾ.5 ರವರನ್ನು ಫ್ರಾಸಾ.5 ಎಂದು, ಚಾಸಾ.6 ರವರನ್ನು ಫ್ರಾಸಾ.6 ಎಂದು, ಚಾಸಾ.9 ರವರನ್ನು ಫ್ರಾಸಾ.7 ಎಂದು, ಚಾಸಾ.10 ರವರನ್ನು ಫ್ರಾಸಾ.8 ಎಂದು, ಚಾಸಾ.11 ರವರನ್ನು ಫ್ರಾಸಾ.9 ಎಂದು, ಚಾಸಾ.7 ರವರನ್ನು ಫ್ರಾಸಾ.10 ಎಂದು, ಚಾಸಾ.12 ರವರನ್ನು ಫ್ರಾಸಾ.11 ಎಂದು ವಿಚಾರಣೆ ಮಾಡಿರುತ್ತಾರೆ.

7. ಅಭಿಯೋಜಕರು ನಿಪಿ-1 ರಿಂದ ನಿಪಿ-11 ರವರೆಗೆ ದಾಖಲೆಗಳನ್ನು ಗುರುತಿಸಿದ್ದು. ನಿಪಿ.1 ದಿನಾಂಕಃ 19.11.2018 ರಂದು ಫ್ರಾಸಾ.1 ರವರು ನೀಡಿದ ದೂರು, ನಿಪಿ.2 ದಿನಾಂಕಃ 21.11.2018 ರಂದು ರಾವೆ ಗ್ರಾಮದ ಮಜಿರೆ ಕೌರಿ ಗ್ರಾಮದ ಫ್ರಾಸಾ.1 ರವರ ವಾಸದ ಮನೆಯ ಮೇಲ್ಭಾಗದ ಐಬೇಕ್ಸ್ ತಂತಿ ಬೇಲಿಯ ಪಕ್ಕದ ಗ್ರಾಮ ಪಂಚಾಯ್ತಿ ರಸ್ತೆಯಲ್ಲಿ ಪಂಚರುಗಳ ಸಮಕ್ಷಮ ಬರೆದ ಕೃತ್ಯ ನಡೆದ ಸ್ಥಳದ ಪಂಚನಾಮೆ, ನಿಪಿ.3 ಮತ್ತು ನಿಪಿ.4 ದಿನಾಂಕಃ20.11.2018 ರಂದು ಕೃತ್ಯ ನಡೆದ ಸ್ಥಳದಲ್ಲಿ ಪಂಚರ ಸಮಕ್ಷಮ ತೆಗೆದ ಪೋಟೋಗಳು, ನಿಪಿ.5 ಫ್ರಾಸಾ.4 ರವರ ಹೇಳಿಕೆ, ನಿಪಿ.6 ಫ್ರಾಸಾ.5 ರವರ ಹೇಳಿಕೆ, ನಿಪಿ.7 ಫ್ರಾಸಾ.6 ರವರ ಹೇಳಿಕೆ, ನಿಪಿ.8 ಫ್ರಾಸಾ.1 ರವರ ಗಾಯದ ಪ್ರಮಾಣ ಪತ್ರ, ನಿಪಿ.9 ಪ್ರಥಮ ವರ್ತಮಾನ ವರದಿ, ನಿಪಿ.10 ದಿನಾಂಕಃ 20.11.2018 ರಂದು ಪಂಚರಿಗೆ ನೀಡಲಾದ ನೋಟೀಸ್ . ನಿಪಿ11 ಪಂಚನಾಮೆ ಕಾಲಕ್ಕೆ ತೆಗೆದ ಕಚ್ಚಾ ನಕಾಶೆ ಹಾಗೂ ಮುದ್ದೆ ಮಾಲು.1 ಮತ್ತು 2 ನ್ನು ಗುರುತಿಸಿರುತ್ತಾರೆ. ಅಭಿಯೋಜನೆ ಪರ ವಿಚಾರಣೆ ಮುಕ್ತಾಯ ಗೊಳಿಸಲಾಗಿದೆ.

8. ದಂಡ ಪ್ರಕ್ರಿಯಾ ಸಂಹಿತೆಯ ಕಲಂ.313 ರಡಿ ಆರೋಪಿಗಳ ಹೇಳಿಕೆಯನ್ನು ಪಡೆಯಲಾಯಿತು.

9. ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರ ವಾದ ಮತ್ತು ಆರೋಪಿಗಳ ಪರ ವಕೀಲರ ವಾದವನ್ನು ಆಲಿಸಲಾಯಿತು. ಕಡತವನ್ನು ಪರಿಶೀಲಿಸಲಾಯಿತು.

10. ಪ್ರಕರಣದ ಪರಿಶೀಲನೆಯ ನಂತರ ಈ ಕೆಳಕಂಡ ಅಂಶಗಳು ಉದ್ಭವವಾಗಿವೆಃ

1. ಭಾರತೀಯ ದಂಡ ಸಂಹಿತೆ ಕಲಂ.504 ಸಹಕಲಂ 34 ರಡಿಯಲ್ಲಿ ಆರೋಪಿಗಳು ಆರೋಪ ಎಸಗಿರುತ್ತಾರೆಂದು ಅಭಿಯೋಜಕರು ಸಂಶಯಾತೀತವಾಗಿ ಸಾಭೀತುಪಡಿಸುತ್ತಾರೆಯೇ?
2. ಭಾರತೀಯ ದಂಡ ಸಂಹಿತೆ ಕಲಂ.324 ಸಹಕಲಂ 34 ರಡಿಯಲ್ಲಿ ಆರೋಪಿಗಳು ಆರೋಪ ಎಸಗಿರುತ್ತಾರೆಂದು ಅಭಿಯೋಜಕರು ಸಂಶಯಾತೀತವಾಗಿ ಸಾಭೀತುಪಡಿಸುತ್ತಾರೆಯೇ?
3. ಭಾರತೀಯ ದಂಡ ಸಂಹಿತೆ ಕಲಂ.323 ಸಹಕಲಂ 34 ರಡಿಯಲ್ಲಿ ಆರೋಪಿಗಳು ಆರೋಪ ಎಸಗಿರುತ್ತಾರೆಂದು ಅಭಿಯೋಜಕರು ಸಂಶಯಾತೀತವಾಗಿ ಸಾಭೀತುಪಡಿಸುತ್ತಾರೆಯೇ?
4. ಭಾರತೀಯ ದಂಡ ಸಂಹಿತೆ ಕಲಂ.506 ಸಹಕಲಂ 34 ರಡಿಯಲ್ಲಿ ಆರೋಪಿಗಳು ಆರೋಪ ಎಸಗಿರುತ್ತಾರೆಂದು ಅಭಿಯೋಜಕರು ಸಂಶಯಾತೀತವಾಗಿ ಸಾಭೀತುಪಡಿಸುತ್ತಾರೆಯೇ?
5. ಯಾವ ಆದೇಶ ?

11. ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿದೆಃ

1 ನೇ ಅಂಶಃ ನಕಾರಾತ್ಮಕವಾಗಿ

2 ನೇ ಅಂಶಃ ನಕಾರಾತ್ಮಕವಾಗಿ

3 ನೇ ಅಂಶಃ ನಕಾರಾತ್ಮಕವಾಗಿ

4 ನೇ ಅಂಶಃ ನಕಾರಾತ್ಮಕವಾಗಿ

5 ನೇ ಅಂಶಃ ಅಂತಿಮ ಆದೇಶದಂತೆ ಈ ಕೆಳಗೆ ವಿವರಿಸಿದ ಕಾರಣಗಳಿಗಾಗಿ

## ಃ ಕಾರಣಗಳು ಃ

12. <u>ಅಂಶ ಸಂಖ್ಯೆ 1 ರಿಂದ 4</u> ಈ ಮೇಲಿನ ಅಂಶಗಳು ಒಂದಕ್ಕೊಂದು ಪೂರಕವಾಗಿದ್ದು ಒಂದೇ ಪ್ರಕರಣದಿಂದ ಉದ್ಭವಿಸುತ್ತದೆ ಹಾಗೂ ಪುನರಾವರ್ತನೆಯನ್ನು ತಡೆಯುವ ಉದ್ದೇಶದಿಂದ ಅವುಗಳನ್ನು ಒಟ್ಟಾಗಿ ಚರ್ಚಿಸಲಾಗಿದೆ.

13. ಪ್ರಕರಣದ ಕಡತವನ್ನು ಪರಿಶೀಲಿಸಿದಾಗ, ನಗರ ಪೋಲೀಸ್ ಠಾಣೆಯ ತನಿಖಾಧಿಕಾರಿ ಆರೋಪಿಗಳ ವಿರುದ್ಧ ಭಾರತ ದಂಡ ಸಂಹಿತೆಯ ಕಲಂ.504, 324, 323, 506 ಸಹಕಲಂ 34 ರಡಿ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

14. ಫ್ರಾಸಾ.1 ರವರು ದೂರುದಾರರು ಮತ್ತು ಗಾಯಾಳು ಸಾಕ್ಷಿದಾರರಾಗಿದ್ದು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತನಗೆ ಓದಲು ಬರೆಯಲು ಬರುವುದಿಲ್ಲ. ಆರೋಪಿತರು ಗೊತ್ತು. ಸುಮಾರು 5 ವರ್ಷಗಳ ಹಿಂದೆ 2.00 ಗಂಟೆ ಸಮಯದಲ್ಲಿ ಕವರಿ ಗ್ರಾಮದ ತನ್ನ ಜಾಗದಲ್ಲಿ ಬೇಲಿಯನ್ನು ಕಟ್ಟುತ್ತಿದ್ದೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಆರೋಪಿತರು ತಮ್ಮ ಬೈಕ್ ನಲ್ಲಿ ಬಂದು ಸೂಳೆಮಗನೆ ನಿನ್ನನ್ನು ಕಡಿಯುತ್ತೀನಿ ಎಂದು ಬೈದರು. 2 ನೆ ಆರೋಪಿ ಬಂದು ಕತ್ತಿಯಿಂದ ಎಡಗೈ ಮುಂಗೈಗೆ ಹೊಡೆದಿರುತ್ತಾರೆ. 1 ನೇ ಆರೋಪಿ ದೊಣ್ಣೆ ತೆಗೆದುಕೊಂಡು ಬಂದು ಬೆನ್ನಿನ ಮೇಲೆ 3 ಹೊಡೆತವನ್ನು ಹೊಡೆದು ನಿನ್ನನ್ನು ಕೊಂದುಬಿಡುತ್ತೇನೆ ಎಂದು ಹೇಳಿದನು ಎಂದು ಸಾಕ್ಷಿ ನುಡಿದಿರುತ್ತಾರೆ. ಆಗ ತಾನು ಕೆಳಕ್ಕೆ ಬಿದ್ದಿರುತ್ತೇನೆ. 1 ನೇ ಅರೋಪಿ ಪುನಃ ಬೆನ್ನಿನ ಮೇಲೆ ಗುದ್ದಿದನು. ನಿನ್ನನ್ನು ಕೊಂದು ಹಾಕುತ್ತೇನೆ ಎಂದು

ಬೆದರಿಕೆ ಹಾಕಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಆಗ ಅಲ್ಲಿಗೆ ಚಾಸಾ.2 ರಿಂದ ಚಾಸಾ.4 ರವರು ಬಂದು ಹೊಡೆಯುವುದನ್ನು ಬಿಡಿಸಿರುತ್ತಾರೆ. ದೊಣ್ಣೆ ಮತ್ತು ಕತ್ತಿಯನ್ನು ಅಲ್ಲಿ ಬಿಸಾಕಿ ಇನ್ನೊಂದು ದಿನ ಸಿಕ್ಕರೆ ಕೊಂದುಹಾಕುತ್ತೇನೆ ಎಂದು ಹೇಳಿ ಬೆದರಿಕೆ ಹಾಕಿ ಹೋಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ತನ್ನ ಮುಂಗೈಗೆ ರಕ್ತ ಗಾಯವಾಗಿದ್ದರಿಂದ ನಗರ ಆಸ್ಪತ್ರೆಗೆ ಹೋಗಿ ಅಲ್ಲಿ ವೈದ್ಯರು ಇಲ್ಲದೇ ಇದ್ದ ಕಾರಣ ಹೊಸನಗರ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಅಲ್ಲಿಗೆ ಪೊಲೀಸರು ಬಂದು ತನ್ನನ್ನು ವಿಚಾರಣೆ ಮಾಡಿ ತನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ.

15. ಪ್ರಾಸಾ.1 ರವರು ತಮ್ಮ ಪಾಟೀ ಸವಾಲಿನಲ್ಲಿ, ತಾನು ಬೇಲಿ ಕಟ್ಟುತ್ತಿರುವಾಗ ಜಾಗದ ಸರ್ವೆ ನಂಬರ್ ಗೊತ್ತಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ತನ್ನ ವಿರುದ್ದ ಆರೋಪಿಗಳು ಪೋಲಿಸರಿಗೆ ದೂರು ನೀಡಿರುತ್ತಾರೆ ಎಂದು ಒಪ್ಪಿಕೊಂಡಿರುತ್ತಾರೆ. ಆರೋಪಿಗಳು ಬಂದಿರುವ ಬೈಕ್ ನ ನಂಬರ್ ಮತ್ತು ಕಂಪನಿ ಗೊತ್ತಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ರಸ್ತೆಯಲ್ಲಿ ಗಲಾಟೆ ಆಗಿರುತ್ತದೆ. ಜಮೀನಿನಲ್ಲಿ ಆಗಿರುವುದಿಲ್ಲ. ಆರೋಪಿಗಳು ಯಾವ ದಿಕ್ಕಿನಿಂದ ಹೊಡೆದರು ಎಂದು ಹೇಳಲು ಬರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ರಕ್ತಗಾಯ ಆದಾ ನಂತರ ತನ್ನ ಬಟ್ಟೆಗೂ ರಕ್ತ ತಾಗಿದ್ದು. ಸದರಿ ಬಟ್ಟೆಯನ್ನು ಪೊಲೀಸರು ತೆಗೆದುಕೊಂಡು ಹೋಗಿರುತ್ತಾರೆಂದು ಒಪ್ಪಿಕೊಂಡಿರುತ್ತಾರೆ.

16. ಪ್ರಾಸಾ1 ರವರು ತಮ್ಮ ಮುಂದುವರೆದ ಪಾಟೀಸವಾಲಿನಲ್ಲಿ, ತಾನು ಆಸ್ಪತ್ರೆಯಲ್ಲಿ ಮೂರು ದಿನ ಇದ್ದು. ಆ ದಿನ ಆಸ್ಪತ್ರೆಗೆ ಪೊಲೀಸರು ಸಮಯ 4.00

ರಿಂದ 5.00 ಗಂಟೆ ಆಗಿರಬಹದು. ತನಗೆ ಆ ದಿನ ಮಾತನಾಡಲು ಆಗುತ್ತಿರಲಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.

17. ಫ್ರಾಸಾ.2 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ.1 ತನ್ನ ಅಣ್ಣ. ಆರೋಪಿತರು ಗೊತ್ತು. ದಿನಾಂಕಃ 19.11.2018 ರಂದು ಸುಮಾರು 12.00 ಗಂಟೆಗೆ ತಾನು ಊರಿನಲ್ಲಿದ್ದಾಗ ಬಗರ್ ಹುಕುಂ ಜಾಗದಲ್ಲಿ ತನ್ನ ಅಣ್ಣ ಚಾಸಾ.1 ರವರು ಬೇಲಿ ಮಾಡುತ್ತಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಆ ಸಮಯಕ್ಕೆ ಆರೋಪಿತರು ಬಂದು ಬೈಕಿನಲ್ಲಿ ಕತ್ತಿ ಮತ್ತು ದೊಣ್ಣೆ ತೆಗೆದುಕೊಂಡು ಬಂದು ಬೋಳಿಮಗನೇ, ಸೂಳೆಮಗನೇ ಎಂದು ಅವಾಚ್ಯವಾಗಿ ಬೈದಿರುತ್ತಾರೆ. ನಿನ್ನನ್ನು ಕೊಲೆ ಮಾಡುತ್ತೇವೆ ಹಾಗೇ ಹೀಗೆ ಎಂದು ಬೈದರು. ನಿನಗೆ ಜಾಗ ಬೇಕೇನೊ ಎಂದು ಕೇಳುತ್ತಾ 2 ನೇ ಆರೋಪಿ ಕತ್ತಿಯಿಂದ ಚಾಸಾ.1 ರವರ ಎಡಗೈಗೆ ಹೊಡೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. 1 ನೇ ಆರೋಪಿ ದೊಣ್ಣೆಯಿದ ಚಾಸಾ.1 ರವರ ಬೆನ್ನಿನ ಮೇಲೆ ಹೊಡೆದಿರುತ್ತಾರೆ, ಚಾಸಾ.1 ರವರು ಅಲ್ಲೆ ಬಿದ್ದಿರುತ್ತಾರೆ. ಆಗ ತಾನು ಚಾಸಾ.3, ಚಾಸಾ.4 ರವರು ಗಲಾಟೆ ಬಿಡಿಸಿ ನಗರ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಅಲ್ಲಿ ವೈದ್ಯರು ಇಲ್ಲದ ಕಾರಣ ಹೊಸನಗರ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತೇವೆ. ಈ ಬಗ್ಗೆ ಪೊಲೀಸರು ತನ್ನನ್ನು ವಿಚಾರಣೆ ಮಾಡಿದ್ದು ಅವರಿಗೆ ತಾನು ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ದಿನಾಂಕಃ 20.11.2018 ರಂದು ಸುಮಾರು ಮದ್ಯಾಹ್ಷ 1.30 ಇಂದ 2.00 ಗಂಟೆ ಸಮಯದಲ್ಲಿ ಪೊಲೀಸರು ಸ್ಥಳಕ್ಕೆ ಪಂಚನಾಮೆಗೆ ಬಂದಿದ್ದರು. ಪೊಲೀಸರಿಗೆ ಘಟನಾ ಸ್ಥಳವನ್ನು ತಾನೇ ತೋರಿಸಿದ್ದು ಎಂದು ಸಾಕ್ಷಿ ನುಡಿದಿರುತ್ತಾರೆ. ಅಲ್ಲಿ

ಚಾಸಾ.7, ಚಾಸಾ.8 ರವರ ಸಮಕ್ಷಮ ಪಂಚನಾಮೆ ಜರುಗಿಸಿ ಹೊಡೆಯಲು ಉಪಯೋಗಿಸಿದ ಕತ್ತಿ ದೊಣ್ಣೆಯನ್ನು ವಶಪಡಿಸಿಕೊಂಡು ತನ್ನ ಸಹಿ ಪಡೆದುಕೊಂಡಿರುತ್ತಾರೆ. ಸ್ಥಳದಲ್ಲಿ ಪೋಟೋ ತೆಗೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ.

18. ಫ್ರಾಸಾ.2 ರವರು ತಮ್ಮ ಪಾಟೀ ಸವಾಲಿನಲ್ಲಿ, ಚಾಸಾ1 ರವರು ತನ್ನ ಸ್ವಂತ ಅಣ್ಣ ಎಂದು ಒಪ್ಪಿಕೊಂಡಿರುತ್ತಾರೆ. ಪಂಚಾಯಿತಿಯವರು ರಸ್ತೆ ಮಾಡಿರುತ್ತಾರೆ. ಸದರಿಯವರು ರಸ್ತೆಯ ವಿಚಾರವಾಗಿ ತಮಗೂ ಮತ್ತು ಆರೋಪಿಗಳಿಗೂ ತಕರಾರು ಇರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ. ಆರೋಪಿತರು ರಸ್ತೆ ಮಾಡಬಾರದು ಎಂದು ತಾವು ರಸ್ತೆ ಮಾಡಬೇಕೆಂದು ಹೇಳುತ್ತಿದ್ದೇವು ಎಂದು ಒಪ್ಪಿಕೊಂಡಿರುತ್ತಾರೆ. 1 ಮತ್ತು 2 ನೇ ಆರೋಪಿತರು ಯಾವ ದಿಕ್ಕಿನಿಂದ ಬಂದರು ಎಂದು ಹೇಳಲು ಆಗುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಚಾಸಾ1 ರವರಿಗೆ 2 ನೇ ಆರೋಪಿಯು ಯಾವ ದಿಕ್ಕಿನಿಂದ ಹೊಡೆದರು ಎಂದು ಹೇಳಲು ಬರುವುದಿಲ್ಲ. ತಾನು ಹೋದ ನಂತರ ಸ್ಥಳಕ್ಕೆ ಯಾರು ಯಾರು ಬಂದರು ಎಂದು ಹೇಳಲು ಬರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಚಾಸಾ1 ರವರ ಎಡಗೈ ರಕ್ತ ಬಂದಿರುತ್ತದೆ ಬಲಗೈ ಯಾವುದೇ ಪೆಟ್ಟುಗಳು ಆಗಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.

19. ಫ್ರಾಸಾ2 ರವರು ತಮ್ಮ ಮುಂದುವರೆದ ಪಾಟೀಸವಾಲಿನಲ್ಲಿ ಸ್ಥಳದಲ್ಲಿ ಪೊಲೀಸರು ಹೇಳಿಕೆಯಲ್ಲಿ ಏನೆನೋ ಬರೆದು ಕೊಂಡರು ಎಂದು ಹೇಳಲು

ಬರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಮಹಜರ್ ನಲ್ಲಿ ತನಗೆ ಏನು ಬರೆದಿದೆ ಎಂದು ಹೇಳಲು ಬರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.

20. ಫ್ರಾಸಾ.3 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿತರು ಗೊತ್ತು. ಚಾಸಾ.1 ರವರು ಗೊತ್ತು. ನವೆಂಬರ್ 2018 ರಂದು ಮಧ್ಯಹ್ನ ಊಟದ ಸಮಯದಲ್ಲಿ ತಾನು ಚಾಸಾ ಗೋಪಾಲ ಕೃಷ್ಣಮೂರ್ತಿ ರತ್ನಾಕರ ಎನ್ನುವರು ತೋಟದ ಕೆಲಸ ಮಾಡುತ್ತಿದ್ದೆವು ಎಂದು ಸಾಕ್ಷಿ ನುಡಿದಿರುತ್ತಾರೆ. ಚಾಸಾ.1 ಮತ್ತು ಆರೋಪಿತರು ಬೇಲಿಗಾಗಿ ಗಲಾಟೆ ಮಾಡುತ್ತಿದ್ದರು. ಯಾರ ಯಾರಿಗೆ ಹೊಡೆದರು ಎಂದು ತಾನು ನೋಡಲಿಲ್ಲ ಬಡಗಿ ಮತ್ತು ಕತ್ತಿ ಇದ್ದವು ಎಂದು ಸಾಕ್ಷಿ ನುಡಿದಿರುತ್ತಾರೆ. ಚಾಸಾ.1 ರವರ ಎಡ ಗೈ ಮೇಲೆ ಪೆಟ್ಟು ಆಗಿತ್ತು. ನಂತರ ತಾನು ಗಲಾಟೆ ಬಿಡಿಸಿ ಕಳುಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

21. ಫ್ರಾಸಾ.3 ರವರು ತಮ್ಮ ಪಾಟೀ ಸವಾಲಿನಲ್ಲಿ, ಯಾರು ಯಾವ ಶಬ್ದಗಳಿಂದ ಬೈದರು ಎಂದು ಹೇಳಲು ಬರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಆ ಸಮಯದಲ್ಲಿ ಚಾಸಾ1 ರವರ ತಾಯಿ ಇದ್ದರು ಮತ್ತು ಚಾಸಾ1 ಮತ್ತು ಚಾಸಾ2 ರವರು ತೋಟದ ಕೆಲಸಕ್ಕೆ ಬಂದಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ತಾನು ಮತ್ತು ಚಾಸಾ2 ರವರು ಅನುನ್ಯೂವಾಗಿ ಇದ್ದೆವು ಎಂದು ಒಪ್ಪಿಕೊಂಡಿರುತ್ತಾರೆ.

22. ಫ್ರಾಸಾ.4 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕಃ 19.02.2018 ರಂದು ಮದ್ಯಾಹ್ನ 2.00 ಗಂಟೆ ಸಮಯದಲ್ಲಿ ಚಾಸಾ.1 ರವರ ಮನೆಯ ಹತ್ತಿರ ಗಲಾಟೆ ಶಬ್ದ ಕೇಳುತ್ತಿತ್ತು, ತಾನು ಮತ್ತು ಚಾಸಾ.5 ಮತ್ತು ಚಾಸಾ.6 ರವರು ಹೋಗಿರುತ್ತೇವೆ. ಆರೋಪಿ 1 ಮತ್ತು 2 ರವರು ಮತ್ತು ಚಾಸಾ.1 ರವರು ಮಧ್ಯ ಗಲಾಟೆ ಆಗುತ್ತಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ತಾನು ಹೋಗಿ ನೋಡಿದಾಗ ಗಲಾಟೆ ಮುಗಿದಿತ್ತು ತಾವು ಹೋಗಿ ನೋಡಿದಾಗ ಆರೋಪಿಗಳ ಕೈಯಲ್ಲಿ ದೊಣ್ಣೆ ಮತ್ತು ಕತ್ತಿ ಇತ್ತು ಯಾರ ಕೈಯಲ್ಲಿ ಯಾವ ಆಯುದ ಇರುತ್ತದೆ ಎಂದು ಗಮನಿಸಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ತಾವು ಘಟನಾ ಸ್ಥಳಕ್ಕೆ ಹೋಗಿ ಆರೊಪಿಗಳಿಗೆ ಮತ್ತು ಚಾಸಾ.1 ರವರಿಗೆ ಗಲಾಟೆ ಮಾಡಬೇಡಿ ಎಂದು ಹೇಳಿ ಕಳುಹಿಸಿರುತ್ತೇವೆ. ಚಾಸಾ.1 ರವರಿಗೆ ಗಾಯ ಆದ್ದರಿಂದ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ವಿಚಾರವಾಗಿ ಪೊಲೀಸರು ತನ್ನ ವಿಚಾರಣೆ ಮಾಡಿ ತನ್ನ ಹೇಳಿಕ ಪಡೆದುಕೊಂಡಿರುತ್ತಾರೆ. ಆರೋಪಿ 1 ಮತ್ತು 2 ರವರು ತಮ್ಮ ಊರಿನವರು ಆಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ.

23. ಫ್ರಾಸಾ.4 ರವರು ತಮ್ಮ ಪಾಟೀ ಸವಾಲಿನಲ್ಲಿ, ತನಗೆ ಗಲಾಟೆಯಲ್ಲಿ ಯಾರು ಯಾರಿಗೆ ಮತ್ತು ಯಾವ ಆಯುಧಗಳಿಂದ ಹಲ್ಲೆ ಮಾಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ತಾನು ಮುದ್ದೇಮಾಲು 1 ಮತ್ತು 2 ರ ಮೇಲೆ ವಿಶೇಷ ಗುರುತು ಇಟ್ಟುಕೊಂಡಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.

ತಾನು ನಿಪಿ1 ರ ಮೇಲೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದು ಒಪ್ಪಿಕೊಂಡಿರುತ್ತಾರೆ.

24. ಫ್ರಾಸಾ.5 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ.1 ರವರು ತನ್ನ ಚಿಕ್ಕಪ್ಪ ನಾಗಬೇಕು. ಸುಮಾರು 2 ವರ್ಷಗಳ ಹಿಂದೆ ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಗ್ರಾವ ಪಂಚಾಯ್ತಿ ರಸ್ತೆಯಲ್ಲಿ  ಬೇಲಿ ವಿಚಾರದಲ್ಲಿ ಜಗಳ ಆಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಆರೋಪಿಗಳು ದೊಣ್ಣೆ ಮತ್ತು ಕತ್ತಿಯಿಂದ ಚಾಸಾ.1 ರವರಿಗೆ ಹೊಡೆದಿರುತ್ತಾರೆ. ಯಾವ ಆರೋಪಿಯು ಯಾವ ಆಯುಧದಿಂದ ಚಾಸಾ.1 ರವರಿಗೆ ಹಲ್ಲೆ ಮಾಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ತನಗೆ ಕತ್ತಿ ಮತ್ತು ದೊಣ್ಣೆಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಸದರಿ ವಿಚಾರದ ಬಗ್ಗೆ ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

25. ಫ್ರಾಸಾ.5 ರವರು ತಮ್ಮ ಪಾಟೀ ಸವಾಲಿನಲ್ಲಿ,  ಯಾರು ಯಾರಿಗೆ ಹಲ್ಲೆ ಮಾಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ತಾನು ಹೊಡೆದಾಟ ಮಾಡುವ ಸಮಯದಲ್ಲಿ ಇರಲಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.  ಕತ್ತಿ ಮತ್ತು ದೊಣ್ಣೆ ಯಾರ ಯಾರ ಕೈಯಲ್ಲಿ ಇತ್ತು ಎಂದು ನೋಡಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.  ತಾನು ಬಂದ ನಂತರ ಚಾಸಾ6 ರವರು ಬಂದಿರುತ್ತಾರೆ ಎಂದು ಒಪ್ಪಿಕೊಂಡಿರುತ್ತಾರೆ.

26. ಪ್ರಾಸಾ.6 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಅಭಿಯೋಜನೆಯ ಪರ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ.6 ರವರ ಸಾಕ್ಷ್ಯವನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ಅವರು ಆರೋಪಿಗಳ ವಿರುದ್ದ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ.

27. ಪ್ರಾಸಾ.7 ರವರು ವೈದ್ಯಾಧಿಕಾರಿ ಸಾಕ್ಷಿದಾರರಾಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕಃ 19.11.2018 ರಂದು ಸಂಜೆ 4.00 ಗಂಟೆ ಹಲ್ಲೆಯ ಹಿನ್ನೆಲೆಯಿಂದ ಚಾಸಾ.1 ರವರು ತಮ್ಮ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿರುತ್ತಾರೆ. ಸದರಿಯವರು ಪರೀಕ್ಷಿಸಿದಾಗ ಸದರಿಯವರು ಬೆನ್ನಿನ ಮೇಲೆ ಮತ್ತು ಬಲಗೈಯಲ್ಲಿ ಮುಟ್ಟಿದರೆ ನೊವು ಇರುತ್ತದೆ ಎಂದು ತಿಳಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಚಾಸಾ.1 ರವರು ಬಲ ಗೈ ಮುಂಗೈಮೆಲೆ ಸುಮಾರು 5x1 ಸೆಮಿ 4 ತಾಜಾ ತೆರಚಿದ ಗಾಯಗಳು ಕಂಡು ಬಂದಿರುತ್ತವೆ. ಸದರಿ ಗಾಯಗಳು 2 ರಿಂದ 4 ಗಂಟೆಯ ಒಳಗೆ ಆಗಿರಬಹುದು ಮತ್ತು ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಆಗಿರುತ್ತದೆ ಎಂದು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ನ್ಯಾಯಾಲಯದ ಮುಂದೆ ದೊಣ್ಣೆ ಮತ್ತು ಕತ್ತಿಯಿಂದ ಹಲ್ಲೆ ಮಾಡಿದಾಗ ನಮೂದಿಸಿದ ಗಾಯಗಳು ಆಗುವ ಸಂಬವ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ.

28. ಪ್ರಾಸಾ.7 ರವರು ತಮ್ಮ ಪಾಟೀ ಸವಾಲಿನಲ್ಲಿ, ಒಬ್ಬ ವ್ಯಕ್ತಿ ಒರಟಾದ ಪ್ರದೇಶದ ಮೇಲೆ ಬಿದ್ದು ಜಾರಿದಾಗ, ನಿಪಿ8 ರಲ್ಲಿ ತೋರಿಸಿದ ಗಾಯಗಳು ಆಗುವ ಸಂಭವ ಇರುತ್ತವೆ ಎಂದು ಒಪ್ಪಿಕೊಂಡಿರುತ್ತಾರೆ.

29. ಫ್ರಾಸಾ.8 ರವರು ತನಿಖಾಧಿಕಾರಿ ಸಾಕ್ಷಿದಾರರಾಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕಃ 19.11.2018 ರಂದು ತಾನು ಠಾಣಾ ಪ್ರಭಾರದಲ್ಲಿ ಇದ್ದಾಗ ಸಂಜೆ 5.00 ಗಂಟೆ ಸಮಯದಲ್ಲಿ ಹೊಸನಗರ ಸರ್ಕಾರಿ ಆಸ್ಪತ್ರೆಯಿಂದ ಎಂ.ಎಲ್.ಸಿ ಮಾಹಿತಿ ಬಂದಿದ್ದು ನಂತರ ಹೆಚ್.ಸಿ 3171 ವೆಂಕಟೇಶ್ ರವರಿಗೆ ಎಂ.ಎಲ್.ಸಿ ರವರ ಹೇಳಿಕೆಯನ್ನು ಪಡೆದುಕೊಂಡು ಬರುವಂತೆ ಆದೇಶ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ಹೆಚ್.ಸಿ 3171 ರವರು ಸಂಜೆ 7.15 ರ ಸಮಯಕ್ಕೆ ತಿರುಗಿ ಠಾಣೆಗೆ ಹಾಜರಾಗಿ ನೀಡಿದ ಚಾಸಾ.1 ರವರ ಹೇಳಿಕೆಯನ್ನು ಸ್ವಿಕರಿಸಿಕೊಂಡು ಠಾಣಾ ಗುನ್ನಾ ನಂ 110/2018 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ತನ್ನ ಮೇಲಾಧಿಕಾರಿಗೆ ನಿವೇದಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ತಾನು ಚಾಸಾ.12 ರವರ ಹೇಳಿಕೆ ಮೇರೆಗೆ ಸದರಿ ಪ್ರಕರಣದ ಕಡತವನ್ನು ಚಾಸಾ.11 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

30. ಫ್ರಾಸಾ.8 ರವರು ತಮ್ಮ ಪಾಟೀ ಸವಾಲಿನಲ್ಲಿ, ಠಾಣೆಗೆ ಹೆಚ್.ಎಂ.ಆರ್ ಮಾಹಿತಿ ಬಂದಾಗ, ಸಂಜೆ 5.00 ಗಂಟೆ ಆಗಿರುತ್ತದೆ. ತನ್ನ ಮುಂದೆ ಚಾಸಾ1 ರವರು ಹೇಳಿಕೆ ದೂರನ್ನು ಹಾಜರುಪಡಿಸದಾಗ ಸಂಜೆ 7.15 ಗಂಟೆ ಆಗಿರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ.

31. ಫ್ರಾಸಾ.9 ರವರು ಮುಂದುವರೆದು ತನಿಖಾಧಿಕಾರಿ ಸಾಕ್ಷಿದಾರರಾಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕಃ 20.11.2018 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ.10 ರವರಿಂದ ಪಡೆದುಕೊಂಡು ಈ ಪ್ರಕರಣದ

ತನಿಖೆಯನ್ನು ಮುಂದುವರಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ದಿನಾಂಕಃ 20.11.2018 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಈ ಪ್ರಕರಣದ ಪಂಚರಾದ ಚಾಸಾ.7 ಮತ್ತು ಚಾಸಾ.8 ರವರಿಗೆ ಪಂಚನಾಮೆಗೆ ಸಹಕರಿಸುವಂತೆ ನೋಟಿಸಿ ಜಾರಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ತಾನು ಚಾಸಾ.7 ಮತ್ತು ಚಾಸಾ.8 ರವರ ಸಮಕ್ಷಮ ಚಾಸಾ.2 ರವರು ಕಬ್ಬಿಣದ ಕತ್ತಿ ಮತ್ತು ದೊಣ್ಣೆಯನ್ನು ತೋರಿಸಿದ್ದನ್ನು ಅಮಾನತ್ತುಪಡಿಸಿಕೊಂಡು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡು ಘಟನಾ ಸ್ಥಳದಲ್ಲಿ ಚಾಸಾ.2 ರವರು ತೋರಿಸಿದ ಘಟನಾ ಸ್ಥಳದಲ್ಲಿ 12.00 ಗಂಟೆಯಿಂದ 1.00 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಮತ್ತು ಪಂಚನಾಮೆ ಕಾಲಕ್ಕೆ ಫೋಟೋಗಳನ್ನು ತೆಗೆದು ಕಚ್ಚಾನಕಾಶೆಯನ್ನು ತಯಾರಿಸಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ.

32. ಫ್ರಾಸಾ.9 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ, ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡ ಮುದ್ದೆ ಮಾಲುಗಳನ್ನು ಠಾಣಾ ಪಿಎಫ್ ನಂ.44/2018 ರಲ್ಲಿ ನೊಂದಾಯಿಸಿ ಮತ್ತು ಅಮಾನತ್ತುಪಡಿಸಿಕೊಂಡ ಮುದ್ದೆ ಮಾಲುಗಳನ್ನು ಮಾನ್ಯ ನ್ಯಾಯಾಲಯಕ್ಕೆ ಅಂತಿಮ ಪಟ್ಟಿ ಸಲ್ಲಿಸುವರೆಗೆ ಪೊಲೀಸ್ ವಶದಲ್ಲಿ ಇಟ್ಟುಕೆಳ್ಳುವವರಗೆ ನ್ಯಾಯಾಲಯದ ಅನುಮತಿ ಪಡೆದಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ಪ್ರಕರಣದ ಚಾಸಾ.2 ರಿಂದ ಚಾಸಾ.6 ರವರ ಹೇಳಿಕೆಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಚಾಸಾ.4 ರಿಂದ ಚಾಸಾ.6 ರವರ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಗುರುತಿಸ್ಪಟ್ಟಿರುತ್ತವೆ ಎಂದು ಸಾಕ್ಷಿ ನುಡಿದಿರುತ್ತಾರೆ. ದಿನಾಂಕಃ 22.11.2018 ರಂದು ಸದರಿ ಪ್ರಕರಣದ

ತನಿಖೆಯನ್ನು ಮುಂದುವರಿಸಿ ಸದರಿ ಪ್ರಕರಣದ ಆರೋಪಿ 1 ಮತ್ತು 2 ರವರು ಸ್ವ ಇಚ್ಚೆಯಿಂದ ಠಾಣೆಗೆ ಹಾಜರಾಗಿದ್ದು ಸದರಿಯವರನ್ನು ಕಾನೂನು ಅಡಿಯಲ್ಲಿ ಬಿಡುಗಡೆ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಯನ್ನು ಚಾಸಾ.12 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

33. ಫ್ರಾಸಾ.9 ರವರು ತಮ್ಮ ಪಾಟೀ ಸವಾಲಿನಲ್ಲಿ, ತಾನು ಮಹಜರ್ ರಿಗೆ ಹೋದಾಗ ಸಮಯ ಸುಮಾರು 12.00 ಗಂಟೆ ಆಗಿರುತ್ತದೆ. ಪಂಚರನ್ನು ಕರೆಸಿರುವುದಿಲ್ಲ ಸ್ಥಳದಲ್ಲಿ ಇದ್ದರು. ತಾನು ಸ್ಥಳೀಯರನ್ನು ಪಂಚರನ್ನಾಗಿ ನೇಮಕ ಮಾಡಿಕೊಂಡಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಘಟನೆ ನಡೆಯಿತು ಎಂಬ ಸ್ಥಳವು ಸರ್ಕಾರಿ ರಸ್ತೆ ಆಗಿರುತ್ತದೆ. ತಾನು ಘಟನಾ ಸ್ಥಳ ಖಾಸಗಿ ಆಸ್ತಿ ಅಥವಾ ಸಾರ್ವಜನಿಕ ಆಸ್ತಿ ಎನ್ನುವುದರ ಬಗ್ಗೆ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.

34. ಫ್ರಾಸಾ.10 ರವರು ಮಹಜರ್ ಸಾಕ್ಷಿದಾರರಾಗಿದ್ದು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕಃ 20.11.2018 ರಂದು ತಾನು ಚಾಸಾ.1 ರವರ ಮನೆಯ ಹತ್ತಿರ ಹೋದಾಗ ಗಲಾಟೆ ಆದ ಸ್ಥಳದಲ್ಲಿ ಮಹಜರ್ ಮಾಡುತ್ತೇವೆ ಎಂದು ತನ್ನನ್ನು ಮತ್ತು ಚಾಸಾ.8 ರವರನ್ನು ನೋಟಿಸ್ ಕೊಟ್ಟು ಕರೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ತಾವು ಘಟನೆ ಆದ ಸ್ಥಳಕ್ಕೆ ಹೋಗಿರುತ್ತೇವೆ. ಸದರಿ ಗಲಾಟೆ ಆದ ಸ್ಥಳವನ್ನು ಚಾಸಾ.2 ರವರು ತೋರಿಸಿರುತ್ತಾರೆ ಎಂದು ಸಾಕ್ಷಿ

ನುಡಿದಿರುತ್ತಾರೆ. ಸದರಿ ಸ್ಥಳದಲ್ಲಿ ಪಂಚನಾಮೆಯನ್ನು 12.00 ರಿಂದ 1.00 ಗಂಟೆಯವರೆಗೆ ಜರುಗಿಸಿ ಅಲ್ಲಿದ್ದ ಕತ್ತಿ ಮತ್ತು ಕಾಡು ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ಕತ್ತಿ ಮತ್ತು ದೊಣ್ಣೆ ಚಾಸಾ.1 ರವರಿಗೆ ಗಲಾಟೆ ಮಾಡಿದ ವಸ್ತುಗಳಾಗಿರುತ್ತವೆ ಎಂದು ಸಾಕ್ಷಿ ನುಡಿದಿರುತ್ತಾರೆ.

35. ಪ್ರಾಸಾ.10 ರವರು ತಮ್ಮ ಪಾಟೀ ಸವಾಲಿನಲ್ಲಿ, ಘಟನಾ ಸ್ಥಳದ ಸುತ್ತ ಮುತ್ತ ವಾಸದ ಮನೆಗಳು ಇರುತ್ತವೆ ಎಂದು ಒಪ್ಪಿಕೊಂಡಿರುತ್ತಾರೆ. ಗಲಾಟೆ ಯಾರ ಮಧ್ಯೆ ಆಗಿದ್ದರ ಬಗ್ಗೆ ಗೊತ್ತಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಕತ್ತಿ ಮತ್ತು ದೊಣ್ಣೆಯನ್ನು ತಾನು ಪೊಲೀಸರಿಗೆ ಕೊಟ್ಟಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ತಾನು ಮತ್ತು ಚಾಸಾ1 ರವರು ವಿಶ್ವಾಸದವರು ಇದ್ದು ಮತ್ತು ಊರು ಮನೆಯವರು ಮತ್ತು ಒಟ್ಟಿಗೆ ಕೆಲಸ ಮಾಡುವವರಾಗಿರುತ್ತೇವೆ ಎಂದು ಒಪ್ಪಿಕೊಂಡಿರುತ್ತಾರೆ.

36. ಪ್ರಾಸಾ.11 ರವರು ಮುಂದುವರೆದು ತನಿಖಾಧಿಕಾರಿ ಸಾಕ್ಷಿದಾರರಾಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕಃ 10.01.2019 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ.11 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ತಾನು ತನ್ನ ತನಿಖಾ ಅವಧಿಯಲ್ಲಿ ದಿನಾಂಕಃ 10.01.2019 ರಂದು ಚಾಸಾ.1 ರವರ ಗಾಯದ ಪ್ರಮಾಣ ಪತ್ರವನ್ನು ಚಾಸಾ.9 ರವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ಪ್ರಕರಣದಲ್ಲಿ ತನಿಖೆ ಪೂರ್ಣಗೊಂಡಿದ್ದರಿಂದ

ಮಾನ್ಯ ನ್ಯಾಯಾಲಯಕ್ಕೆ ಆರೋಪಿಯ ವಿರುದ್ದ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಫ್ರಾಸಾ.11 ರವರು ತಮ್ಮ ಪಾಟೀ ಸವಾಲಿನಲ್ಲಿ, ತಮ್ಮ ಪರವಾಗಿ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

37. ಅಭಿಯೋಜಕರು ಹಾಜರುಪಡಿಸಿದ ನಿಪಿ.1 ರಿಂದ ನಿಪಿ.11 ದಾಖಲೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ನಿಪಿ1 ಚಾಸಾ1 ರವರು ನೀಡಿದ ದೂರು ಆಗಿರುತ್ತದೆ. ಸದರಿ ದೂರಿನಲ್ಲಿರುವ ಅಂಶಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ದಿನಾಂಕ 19.11.2018 ಮಾಧ್ಯಹ್ನ 12.00 ಗಂಟೆ ಸಮಯದಲ್ಲಿ ಬಗರ್ ಹಕುಂ ಜಾಗದಲ್ಲಿ ಬೇಲಿ ಕಟ್ಟಿತ್ತಿದ್ದು. ಆ ಸಮಯದಲ್ಲಿ ಆರೋಪಿಗಳು ಒಂದು ಬೈಕ್ ನಲ್ಲಿ ಬಂದು. ಸದರಿ ಬೈಕ್ ನ ನಂಬರ್ ತಿಳಿದಿರುವುದಿಲ್ಲ. ಆರೋಪಿ 2 ರವರು ತನ್ನ ಬೇಲಿ ಹತ್ತಿರ ಬಂದವರೇ ಏನೋ ಸೂಳೆಮಗನೆ ನಿನ್ನ ಮನೆಗೆ ರಸ್ತೆ ಬೇಕೆನೋ ಆರೋಪಿ 2 ರವರು ತನ್ನ ಕೈಯಲ್ಲಿ ಕತ್ತಿ ಹಿಡಿದುಕೊಂಡು ತನ್ನ ಎಡಗೈ ಕತ್ತಿಯಾದ ಮುದ್ದೇಮಾಲು 2 ರಿಂದ ಹೊಡೆದು ರಕ್ತಗಾಯಪಡಿಸಿದ್ದು. ತಾನು ಕೂಗಿ ನೆಲಕ್ಕೆ ಬಿದ್ದಾಗ, ಆರೋಪಿ 1 ರವರು ದೊಣ್ಣೆಯಿಂದ ತನ್ನ ಬೆನ್ನಿನ ಮೇಲೆ ಹೊಡೆದು ತನ್ನನ್ನು ಇಷ್ಟಕ್ಕೆ ಬಿಡುವುದಿಲ್ಲ ಎಂದ ಕೊಲೆ ಬೆದರಿಕೆ ಹಾಕಿ ಕೈಯಿಂದ ಗುದ್ದಾಗ ಅಲ್ಲೆ ಇದ್ದ ತನ್ನ ತಮ್ಮ ಚಂದ್ರ (ಚಾಸಾ2) ತಮ್ಮ ಊರಿನ ಫ್ರಾಸಾ4 ಮತ್ತು ಇವರು ಜಗಳ ಬಿಡಿಸಿರುತ್ತಾರೆ. ಆಗ ಆರೋಪಿಗಳು ತಾವು ತಂದಿದ್ದ ಮುದ್ದೇಮಾಲು 1 ಮತ್ತು 2 ನ್ನು ಅಲ್ಲೆ ಬಿಸಾಕಿ ಹೋಗಿದ್ದಾರೆಂದು ದೂರನ್ನು ದಾಖಲಿಸಿರುತ್ತಾರೆ.

38. ಸದರಿ ದೂರನ್ನು ಫ್ರಾಸಾ4 ರವರು ಫ್ರಾಸಾ1 ರವರು ಹೇಳಿದಂತೆ, ಕೈಬರಹ ದೂರು ಆಗಿರುತ್ತದೆ. ಫ್ರಾಸಾ1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಫ್ರಾಸಾ4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತಾನು ನಿಪಿ1 ರ ದೂರನ್ನು ಫ್ರಾಸಾ1 ರವರು ಹೇಳಿದಂತೆ ಬರೆದಿರುತ್ತೇನೆ ಎಂದು ಯಾವುದೇ ಸಾಕ್ಷ್ಯ ನುಡಿದಿರುವುದಿಲ್ಲ. ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಪೊಲೀಸರು ತನಗೆ ವಿಚಾರಣೆ ಮಾಡಿ ತನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದು ಒಪ್ಪಿಕೊಂಡಿರುತ್ತಾರೆ ಮತ್ತು ತನ್ನ ಮುಖ್ಯ ವಿಚಾರಣೆಯಲ್ಲಿ ಫ್ರಾಸಾ1 ರವರು ಹೇಳಿದಂತೆ ದೂರನ್ನು ಬರೆದಿರುತ್ತೇನೆ ಎಂದು ಒಪ್ಪಿಕೊಂಡಿರುವುದಿಲ್ಲ. ಕೇವಲ ಸಹಿ ಮಾತ್ರ ಹಾಕಿರುತ್ತೇನೆ ಎಂದು ಒಪ್ಪಿಕೊಂಡಿರುತ್ತಾರೆ.

39. ಫ್ರಾಸಾ4 ರವರು ತಮ್ಮ ಪಾಟೀಸವಾಲಿನಲ್ಲಿ, ನಿಪಿ1 ದೂರನಲ್ಲಿ ಕೇವಲ ಸಹಿ ಮಾತ್ರ ಹಾಕಿರುತ್ತೇನೆ. ದೂರನ್ನು ಬರೆದಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಫ್ರಾಸಾ4 ರವರ ಸಾಕ್ಷ್ಯವನ್ನು ಕೂಲಂಕುಶವಾಗಿ ಪರಿಗಣಿಸಿದಾಗ, ಫ್ರಾಸಾ4 ರವರು ಫ್ರಾಸಾ1 ರವರು ಹೇಳಿದಂತೆ ದೂರನ್ನು ಬರೆಯದೆ ಇರುವುದು ಕಂಡುಬರುತ್ತದೆ.

40. ನಿಪಿ2 ದಿನಾಂಕ 20.11.2018 ರಂದು ಕೃತ್ಯ ನಡೆದ ಸ್ಥಳದಲ್ಲಿ ಫ್ರಾಸಾ10 ಮತ್ತು ಚಾಸಾ8 ರವರ ಸಮಕ್ಷಮ ಫ್ರಾಸಾ9 ರವರು ಮಧ್ಯಾಹ್ನ 12.00 ಗಂಟೆಯಿಂದ 1.00 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ನಿಪಿ11 ರಂತೆ ಕಚ್ಚಾ ನಕಾಶೆಯನ್ನು ತಯಾರಿಸಿ ನಿಪಿ3 ಮತ್ತು ನಿಪಿ4 ರಂತೆ ಭಾವಚಿತ್ರಗಳನ್ನು ತೆಗೆದಿರುತ್ತಾರೆ. ನಿಪಿ10 ಫ್ರಾಸಾ10 ಮತ್ತು ಚಾಸಾ8 ರವರಿಗೆ ನೀಡಿದ ಪಂಚನಾಮೆ ನೋಟಿಸ್ ಆಗಿರುತ್ತದೆ.

ಸದರಿ ಪಂಚನಾಮೆಯನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ಫ್ರಾಸಾ9 ರವರು ಫ್ರಾಸಾ10 ಮತ್ತು ಚಾಸಾ8 ರವರಿಗೆ ನಿಪಿ 10 ರಂತೆ ನೋಟಿಸ್ ನೀಡಿ. ಕೃತ್ಯ ನಡೆದ ಸ್ಥಳದಲ್ಲಿ ಫ್ರಾಸಾ2 ರವರು ತೋರಿಸಿದ ಸ್ಥಳದಲ್ಲಿ ಪಂಚರ ಸಮಕ್ಷಮ ಮುದ್ದೇಮಾಲು 1 ಮತ್ತು 2 ನ್ನು ಅಮಾನುತುಪಡಿಸಿಕೊಂಡ ಪಂಚನಾಮೆ ಆಗಿರುತ್ತದೆ.

41. ಫ್ರಾಸಾ2 ರವರು ತಮ್ಮ ಪಾಟೀಸವಾಲಿನಲ್ಲಿ, ಪಂಚನಾಮೆ ಕಾಲಕ್ಕೆ ಪೊಲೀಸರು ಏನು ಏನು ಬರೆದುಕೊಂಡಿದ್ದರು ಎಂದು ಹೇಳಲು ಬರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ ಮತ್ತು ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ತನಗೆ ಗೊತ್ತಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಫ್ರಾಸಾ10 ರವರು ಪಂಚನಾಮೆ ಸಾಕ್ಷಿದಾರರು ಆಗಿದ್ದು. ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತನ್ನನ್ನು ಮತ್ತು ಚಾಸಾ8 ರವರನ್ನು ನೋಟಿಸ್ ಕೊಟ್ಟು ಕರೆದಿರುತ್ತಾರೆ ಎಂದು ಒಪ್ಪಿಕೊಂಡಿರುತ್ತಾರೆ.

42. ಫ್ರಾಸಾ9 ರವರು ತನಿಖಾಧಿಕಾರಿ ಆಗಿದ್ದು. ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 20.11.2018 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಟ್ಟು ಚಾಸಾ7 ಮತ್ತು ಚಾಸಾ8 ರವರಿಗೆ ಪಂಚನಾಮೆಗೆ ಸಹಕರಿಸುವಂತೆ ನೋಟಿಸ್ ಜಾರಿ ಮಾಡಿರುತ್ತೇನೆ ಎಂದು ಒಪ್ಪಿಕೊಂಡಿರುತ್ತಾರೆ. ಸದರಿಯವರು ತಮ್ಮ ಪಾಟೀಸವಾಲಿನಲ್ಲಿ, ತಾನು ಮಹಜರ್ ಗೆ ಹೋದಾಗ, ಸಮಯ 12.00 ಗಂಟೆ ಆಗಿರುತ್ತದೆ. ಸ್ಥಳದಲ್ಲಿ ಪಂಚರು ಇದ್ದರು ತಾವು ಪಂಚರಗಳನ್ನು ಕರೆದಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ನಿಪಿ11 ಕಚ್ಚಾ ನಕಾಶೆ ಆಗಿದ್ದು. ಸದರಿ ಕಚ್ಚಾ ನಕಾಶೆಯಲ್ಲಿ ಮುದ್ದೇಮಾಲು 1 ಮತ್ತು 2 ಬಿದ್ದ ಸ್ಥಳದ ಬಗ್ಗೆ ತೋರಿಸಿರುವುದಿಲ್ಲ.

43. ನಿಪಿ5 ರಿಂದ ನಿಪಿ7 ಫ್ರಾಸಾ4 ರಿಂದ ಫ್ರಾಸಾ 6 ರವರ ಹೇಳಿಕೆ ಆಗಿರುತ್ತದೆ. ನಿಪಿ8 ಚಾಸಾ1 ರವರ ಗಾಯದ ಪ್ರಮಾಣ ಪತ್ರವಾಗಿದ್ದು. ಸದರಿ ಗಾಯದ ಪ್ರಮಾಣ ಪತ್ರವನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ಚಾಸಾ1 ರವರು ಹೊಸನಗರದ ಸರ್ಕಾರಿ ಆಸ್ಪತ್ರೆಗೆ ದಿನಾಂಕ 19.11.2018 ರಂದು ಚಿಕಿತ್ಸೆಗೆ ಒಳಪಟ್ಟಿರುತ್ತಾರೆ. ಸದರಿಯವರ ಗಾಯದ ಪ್ರಮಾಣ ಪತ್ರವನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ಫ್ರಾಸಾ1 ರವರಿಗೆ ಬೆನ್ನಿನ ಮೇಲೆ ಮತ್ತು ಬಲಗೈ ಮೇಲೆ ಮುಟ್ಟಿದರೆ ನೋವು ಇರುತ್ತದೆ ಎಂದು ಮತ್ತು ಚಾಸಾ1 ರವರ ಬಲಗೈ ಮುಂಗೈ ನ ಮೇಲೆ 5 X 1 ಸೆಂ.ಮೀಟರ್ ನಾಲ್ಕು ತಾಜಾ ಗಾಯಗಳು ಆಗಿದ್ದು. ಅವುಗಳು ಸಾಮಾನ್ಯ ಸ್ವರುಪದ ಗಾಯಗಳು ಆಗಿರುವುದು ಕಂಡುಬರುತ್ತದೆ.

44. ಫ್ರಾಸಾ7 ರವರು ಫ್ರಾಸಾ1 ರವರ ನಿಪಿ8 ರಂತೆ ನೀಡಿದ ಗಾಯದ ಪ್ರಮಾಣ ನೀಡಿದ ವೈದ್ಯಕೀಯ ಸಾಕ್ಷಿದಾರರು ಆಗಿರುತ್ತಾರೆ. ಸದರಿಯವರು ತಮ್ಮ ಪಾಟೀಸವಾಲಿನಲ್ಲಿ, ಒಬ್ಬ ವ್ಯಕ್ತಿಯು ಒರಟಾದ ಪ್ರದೇಶದಲ್ಲಿ ಬಿದ್ದು ಜಾರಿದಾಗ ನಿಪಿ8 ರಲ್ಲಿ ತೋರಿಸಿದ ಗಾಯಗಳು ಆಗುವ ಸಂಭವ ಇರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ.

45. ಫ್ರಾಸಾ1 ರವರು ತಮ್ಮ ಪಾಟೀಸವಾಲಿನಲ್ಲಿ, ರಕ್ತಗಾಯ ಆದಾ ನಂತರ ತನ್ನ ಬಟ್ಟೆಗೂ ರಕ್ತ ತಾಗಿತ್ತು ಮತ್ತು ತಾನು ಮೂರು ದಿನ ಆಸ್ಪತ್ರೆಯಲ್ಲಿ ಇದ್ದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಆದರೆ, ವೈದ್ಯಕೀಯ ಸಾಕ್ಷಿದಾರಾದ ಫ್ರಾಸಾ7 ರವರು ಫ್ರಾಸಾ1 ರವರು ತಮ್ಮ ಆಸ್ಪತ್ರೆಯಲ್ಲಿ ಮೂರು ದಿನ ಚಿಕಿತ್ಸೆ ಪಡೆದುಕೊಂಡಿದ್ದರ ಬಗ್ಗೆ ಯಾವುದೇ ಸಾಕ್ಷ್ಯನುಡಿದಿರುವುದಿಲ್ಲ ಮತ್ತು ಫ್ರಾಸಾ1 ರವರಿಗೆ ರಕ್ತಗಾಯವಾದ ಬಗ್ಗೆ

ಯಾವುದೇ ನಿಪಿ8 ರ ಗಾಯದ ಪ್ರಮಾಣ ಪತ್ರದಲ್ಲಿ ತೋರಿಸಿರುವುದಿಲ್ಲ. ಆದ್ದರಿಂದ ಫ್ರಾಸಾ1 ರವರ ಸಾಕ್ಷ್ಯಕ್ಕೂ ಮತ್ತು ನಿಪಿ8 ರಲ್ಲಿ ತೋರಿಸಿದ ಗಾಯಗಳಿಗೂ ಮತ್ತು ವೈದ್ಯಕೀಯ ಸಾಕ್ಷ್ಯಕ್ಕೂ ಒಂದಕ್ಕೊಂದು ಪೂರಕವಾಗಿರುವುದಿಲ್ಲ.

46. ನಿಪಿ10 ಪ್ರಥಮ ವರ್ತಮಾನ ವರದಿ ಆಗಿರುತ್ತದೆ. ಸದರಿ ಪ್ರಥಮ ವರ್ತಮಾನ ದಾಖಲೆಯ ಬಗ್ಗೆ ಆರೋಪಿಗಳು ಮತ್ತು ಅಭಿಯೋಜಕರ ಮಧ್ಯೆ ಯಾವುದೇ ತಕರಾರು ಇಲ್ಲದೆ ಇರುವುದರಿಂದ ಅದನ್ನು ಸಾಬೀತು ಪಡಿಸುವ ಅವಶ್ಯಕತೆ ಇರುವುದಿಲ್ಲ.

47. ಅಭಿಯೋಜಕರ ಪ್ರಕರಣದಂತೆ, ಫ್ರಾಸಾ1 ರವರು ತಮ್ಮ ಬಗರ್ ಹಕುಂ ಜಮೀನಿನಲ್ಲಿ ಬೇಲಿ ಕಟ್ಟುತ್ತಿದ್ದಾಗ, ಆರೋಪಿ 1 ಮತ್ತು 2 ರವರು ಬೈಕ್ ನಲ್ಲಿ ಬಂದು ಮುದ್ದೇಮಾಲು 1 ಮತ್ತು 2 ರಿಂದ ಹಲ್ಲೆ ಮಾಡಿ ರಕ್ತಗಾಯ ಪಡಿಸಿ ಮತ್ತು ಅವಾಚ್ಯ ಶಬ್ದಗಳಿಂದ ಬೈದು, ಜೀವ ಬೆದರಿಕೆ ಹಾಕಿರುತ್ತಾರೆಂದು ಆರೋಪಿಗಳ ವಿರುದ್ಧ ಆಪಾದನೆ ಇರುತ್ತದೆ. ಫ್ರಾಸಾ1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಓದು, ಬರೆಯಲು ಬರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ನಿಪಿ1 ದೂರನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ನಿಪಿ 1 ರ ದೂರನ್ನು ಫ್ರಾಸಾ4 ರವರು ಬರೆದು ಕೊಟ್ಟಿರುವುದು ಕಂಡುಬರುತ್ತದೆ. ಆದರೆ, ಫ್ರಾಸಾ4 ರವರು ಪ್ರತ್ಯಕ್ಷ ಮತ್ತು ದೂರನ್ನು ಬರೆದುಕೊಟ್ಟ ಸಾಕ್ಷಿದಾರರು ಆಗಿದ್ದು. ಸದರಿಯವರು ತಮ್ಮ ಪಾಟೀಸವಲಾನಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ತಾನು ಫ್ರಾಸಾ1 ರವರು ಹೇಳಿದಂತೆ, ನಿಪಿ1 ರ ದೂರನ್ನು ಹೇಳಿಸಿ ಬರೆಸಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಆದರೆ,

ಅಭಿಯೋಜಕರು ನಿಪಿ1 ನ್ನು ಯಾರು ಬರೆದಿರುತ್ತಾರೆ ಎಂದು ಕಾನೂನು ಅಡಿಯಲ್ಲಿ ರುಜುವಾತುಪಡಿಸಲು ವಿಫಲರಾಗಿರುತ್ತಾರೆ.

48. ಫ್ರಾಸಾ1 ರವರು ಗಾಯಾಳು ಮತ್ತು ಪಿರ್ಯಾದುದಾರರು ಆಗಿದ್ದು. ತನಗೆ ರಕ್ತಗಾಯ ಆದಾ ನಂತರ ತನ್ನ ಬಟ್ಟೆಗೂ ರಕ್ತ ತಾಗಿತ್ತು. ಸದರಿ ಬಟ್ಟೆಯನ್ನು ಪೊಲೀಸರು ತೆಗೆದುಕೊಂಡು ಹೋಗಿರುತ್ತಾರೆ ಎಂದು ಒಪ್ಪಿಕೊಂಡಿರುತ್ತಾರೆ. ಆದರೆ, ತನಿಖಾಧಿಕಾರಿಗಳು ಸದರಿ ರಕ್ತ ಅತ್ತಿದ ಬಟ್ಟೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ತನಗೆ ಮಾತನಾಡಲು ಆಗುತ್ತಿರಲಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಅಂದರೆ, ಫ್ರಾಸಾ1 ರವರು ತಾನು ದೂರನ್ನು ಹೇಳಿಸಿ ಬರೆಸಿಲ್ಲ ಎಂಬುದು ಫ್ರಾಸಾ1 ರವರ ಸಾಕ್ಷ್ಯದ ಮೂಲಕ ಸ್ವಷ್ಟವಾಗಿ ಕಂಡುಬರುತ್ತದೆ.

49. ಫ್ರಾಸಾ2 ರವರು ಪತ್ರಕ್ಷ ಸಾಕ್ಷಿದಾರರು ಆಗಿದ್ದು. ಆರೋಪಿ 1 ಮತ್ತು 2 ರವರು ಯಾವ ದಿಕ್ಕಿನಿಂದ ಬಂದರು ಹೇಳಲು ಬರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಫ್ರಾಸಾ3 ರವರು ಇನ್ನೊಬ್ಬ ಪ್ರತ್ಯಕ್ಷ ಸಾಕ್ಷಿದಾರರು ಆಗಿದ್ದು. ಸದರಿಯವರು ತಮ್ಮ ಪಾಟೀಸವಾಲಿನಲ್ಲಿ, ಆರೋಪಿಗಳು ಯಾವ ಯಾವ ಶಬ್ದಗಳಿಂದ ಬೈದರು ಎಂದು ಹೇಳಲು ಬರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ ಮತ್ತು ಆರೋಪಿಗಳು ಯಾವ ದಿಕ್ಕಿನಿಂದ ಬಂದರು ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.

50. ಫ್ರಾಸಾ4 ರವರು ಇನ್ನೊಬ್ಬ ಪ್ರತ್ಯಕ್ಷ ಸಾಕ್ಷಿದಾರರು ಆಗಿದ್ದು. ಸದರಿಯವರು ತಮ್ಮ ಅಭಿಯೋಜಕರ ಪಾಟೀಸವಾಲಿನಲ್ಲಿ, ಆರೋಪಿ 1 ರವರು ತನ್ನ ಕೈಯಲ್ಲಿ ಇದ್ದ

ಮುದ್ದೇಮಾಲು 2 ರಿಂದ ಚಾಸಾ1 ರವರಿಗೆ ಹಲ್ಲೆ ಮಾಡಿರುವುದನ್ನು ಒಪ್ಪಿಕೊಂಡಿರುವುದಿಲ್ಲ. ಗಲಾಟೆಯಲ್ಲಿ ಯಾರು ಯಾರಿಗೆ ಯಾವ ಆಯುಧಗಳಿಂದ ಹೊಡೆದಿರುತ್ತಾರೆ ಎಂದು ತನಗೆ ಗೊತ್ತಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಫ್ರಾಸಾ5 ರವರು ಇನ್ನೊಬ್ಬ ಪ್ರತ್ಯಕ್ಷ ಸಾಕ್ಷಿದಾರಾಗಿದ್ದು. ಕತ್ತಿ ಮತ್ತು ದೊಣ್ಣೆ ಯಾರ ಕೈಯಲ್ಲಿ ಇತ್ತು ಎಂದು ನೋಡಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಯಾರು ಯಾರಿಗೆ ಹಲ್ಲೆ ಮಾಡಿರುತ್ತಾರೆ ಎಂದು ತನಗೆ ಹೇಳಲು ಬರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ ಮತ್ತು ತಾನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.

51. ಫ್ರಾಸಾ6 ರವರು ಇನ್ನೊಬ್ಬ ಪ್ರತ್ಯಕ್ಷ ಸಾಕ್ಷಿದಾರರು ಆಗಿದ್ದು. ಸದರಿಯವರು ಅಭಿಯೋಜಕರ ವಿರುದ್ದವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಫ್ರಾಸಾ2 ರಿಂದ ಫ್ರಾಸಾ6 ರವರ ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯವನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ಸದರಿಯವರು ಆರೋಪಿಗಳು ಯಾವ ದಿಕ್ಕಿನಿಂದ ಬಂದಿರುತ್ತಾರೆ ಮತ್ತು ಯಾವ ಆರೋಪಿ ಕೈಯಲ್ಲಿ ಯಾವ ಆಯುಧಗಳು ಇತ್ತು ಎಂದು ಯಾವುದೇ ಬಲವಾದ ಸಾಕ್ಷ್ಯ ನುಡಿದಿರುವುದಿಲ್ಲ ಮತ್ತು ಸದರಿಯವರ ಸಾಕ್ಷ್ಯಗಳು ಮತ್ತು ಫ್ರಾಸಾ1 ರವರ ಸಾಕ್ಷ್ಯಕ್ಕೂ ಮತ್ತು ವೈದ್ಯಕೀಯ ಸಾಕ್ಷ್ಯಕ್ಕೂ ಒಂದಕ್ಕೊಂದು ಪೂರಕವಾಗಿರುವುದಿಲ್ಲ. ಅಭಿಯೋಜಕರು ಚಾಸಾ.8 ರವರನ್ನು ವಿಚಾರಣೆಯಿಂದ ಕೈ ಬಿಟ್ಟಿರುತ್ತಾರೆ.

52. ಅಭಿಯೋಜಕರು ಸಾಕ್ಷಿದಾರರ ಕೊರತೆ ಮತ್ತು ಅಭಿಯೋಜಕರು ತಮ್ಮ ಪ್ರಕರಣವನ್ನು ಸಮರ್ಥಿಸಿಕೊಳ್ಳಲು ವಿಶ್ವಾಸರ್ಹವಾದ ಮತ್ತು ಬಲವಾದ ಪೂರಾವೆಯನ್ನು ಒದಗಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ.

ಅಭಿಯೋಜಕರು ಕೇವಲ ನಾಮಕಾವಸ್ಥೆಯ ಪ್ರಕರಣವನ್ನು ಆರೋಪಿತರ ವಿರುದ್ಧ ದಾಖಲಿಸಿದ್ದು ಮತ್ತು ಸಾಕ್ಷಿಗಳ ಹೇಳಿಕೆ ಮತ್ತು ದಾಖಲೆಗಳ ಪ್ರಕಾರ, ಬೆಂಬಲಿತವಾಗಿರುವುದಿಲ್ಲ.

53. ಫ್ರಾಸಾ1 ರಿಂದ ಫ್ರಾಸಾ.11 ಸಾಕ್ಷ್ಯಗಳು ಮತ್ತು ನಿಪಿ.1 ರಿಂದ ನಿಪಿ.11 ದಾಖಲೆಗಳು ಒಂದಕ್ಕೊಂದು ಪೂರಕವಾಗಿರುವುದಿಲ್ಲ. ಆದ್ದರಿಂದ ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಅಭಿಯೋಜಕರು ಆರೋಪಿಗಳ ವಿರುದ್ಧ ಭಾರತ ದಂಡ ಸಂಹಿತೆಯ ಕಲಂ. 504, 324, 323, 506 ಸಹಕಲಂ 34 ರಡಿ ಆರೋಪಗಳನ್ನು ಸಂಶಯಾತೀತವಾಗಿ ಸಾಭೀತುಪಡಿಸಲು ವಿಫಲ ರಾಗಿರುವುದರಿಂದ ಅಂಶ 1 ರಿಂದ 4 ಅನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

54. <u>**5 ನೇ ಅಂಶಃ-**</u> ಮೇಲೆ ಚರ್ಚಿಸಿರುವ ಸಂಗತಿಗಳನ್ನು ಗಮನದಲ್ಲಿರಿಸಿಕೊಂಡು ಮುಂದಿನಂತೆ ಆದೇಶ ಮಾಡಲಾಗಿದೆ:

## <u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 248(1) ರ ಅನುಸಾರ ಲಭ್ಯವಿರುವ ಅಧಿಕಾರವನ್ನು ಉಪಯೋಗಿಸಿಕೊಂಡು, ಭಾರತ ದಂಡ ಸಂಹಿತೆಯ ಕಲಂ.504, 324, 323, 506 ಸಹಕಲಂ 34 ರಡಿ ಶಿಕ್ಷಾರ್ಹ ಅಪರಾಧವನ್ನು ಆರೋಪಿಗಳು ಎಸಗಿದ್ದಾರೆಂದು ಅಭಿಯೋಜಕರು ಸಂಶಯಾತೀತವಾಗಿ ಸಾಬೀತುಪಡಿಸುವಲ್ಲಿ ವಿಫಲರಾಗಿದ್ದಾರೆಂದು ತೀರ್ಮಾನಿಸಿ, ಆರೋಪಿಗಳನ್ನು ಬಿಡುಗಡೆಗೊಳಿಸಲಾಗಿದೆ.

ಆರೋಪಿಗಳ ಹಾಗೂ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಯನ್ನು ಮೇಲ್ಮನವಿ ಅವಧಿ ಮುಗಿದ ನಂತರ ರದ್ದುಗೊಳಿಸುವಂತೆ ಆದೇಶ ಮಾಡಲಾಗಿದೆ.

ಮೇಲ್ಮನವಿಯ ಅವಧಿಯು ಮುಗಿದ ನಂತರ ಪಿ.ಎಫ್ ನಂ.44/2018 ರಡಿಯಲ್ಲಿ ಅಮಾನತ್ತು ಪಡಿಸಿಕೊಂಡ ಕ್ರ.ಸಂಖ್ಯೆ ನಂ.1 ರ ಒಂದು ಕಬ್ಬಿಣದ 15 ಇಂಚು ಉದ್ದದ ಕತ್ತಿಯನ್ನು ಬಹಿರಂಗ ಹರಾಜು ಮಾಡಿ, ಬಂದಂತಹ ಹಣವನ್ನು ಸರ್ಕಾರಕ್ಕೆ ಕಟ್ಟಲು ಆದೇಶಿಸಲಾಗಿದೆ.

ಮೇಲ್ಮನವಿಯ ಅವಧಿಯು ಮುಗಿದ ನಂತರ ಪಿ.ಎಫ್ ನಂ.44/2018 ರಡಿಯಲ್ಲಿ ಅಮಾನತ್ತು ಪಡಿಸಿಕೊಂಡ ಕ್ರ.ಸಂಖ್ಯೆ ನಂ.2 ರ ಒಂದು ಕಾಡುಜ ಾತಿಯ ಹಿಡಿ ಗಾತ್ರದ 3 ಅಡಿ ಉದ್ದದ ಹಿಡಿ ಮರದ ದೊಣ್ಣೆಯು ಮೌಲ್ಯರಹಿತ ವಾಗಿರುವುದರಿಂದ ನಾಶಪಡಿಸಲು ಈ ಮೂಲಕ ನಿರ್ದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ತಿದ್ದುಪಡಿ ಮಾಡಿ, ಈ ದಿನ ದಿನಾಂಕ 04 ನೇ ದಿವಸ ಜೂನ್ ಮಾಹೆ 2026 ನೇ ಇಸವಿಯಂದು ಪರಿಷ್ಕರಿಸಲ್ಪಟ್ಟ ತೀರ್ಪನ್ನು ಬಹಿರಂಗ ನ್ಯಾಯಾಲಯದಲ್ಲಿ ಓದಲಾಯಿತು).

(ಮಾರುತಿ ಆರ್. ಶಿಂಧೆ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸನಗರ.

## ಅನುಬಂಧ

1. ಅಭಿಯೋಜನದವರ ಪರವಾಗಿ ವಿಚಾರಣೆಗೆ ಗುರುಪಡಿಸಲಾದ ಸಾಕ್ಷದವರ ಪಟ್ಟಿ :

| | | |
|---|---|---|
| ಪ್ರಾಸಾ.1 | : | ಶ್ರೀ ಮಂಜಪ್ಪ |
| ಪ್ರಾಸಾ.2 | : | ಶ್ರೀ ಚಂದ್ರಪ್ಪ |
| ಪ್ರಾಸಾ.3 | : | ಶ್ರೀ ಪ್ರಭಾಕರ |
| ಪ್ರಾಸಾ.4 | : | ಶ್ರೀ ದೇವೆಂದ್ರ |
| ಪ್ರಾಸಾ.5 | : | ಶ್ರೀ ರತ್ನಾಕರ |
| ಪ್ರಾಸಾ.6 | : | ಶ್ರೀ ನಾಗೇಂದ್ರ ಹೆಚ್.ಪಿ. |
| ಪ್ರಾಸಾ.7 | : | ಶ್ರೀ ಡಾ.ಜೆ.ಪಿ.ಲಿಂಗರಾಜ್ |

| | | |
|---|---|---|
| ಪ್ರಾಸಾ.8 | : | ಶ್ರೀ ಶ್ರೀಪಾದ ಎಸ್.ಬಿ |
| ಪ್ರಾಸಾ.9 | : | ಶ್ರೀ ಈರೇಶ ಇ. ಆರ್ |
| ಪ್ರಾಸಾ.10 | : | ಶ್ರೀ ಕೃಷ್ಣಮೂರ್ತಿ |
| ಪ್ರಾಸಾ.11 | : | ಶ್ರೀ ದೇವರಾಯ |

**2.** ಅಭಿಯೋಜನದವರ ಪರವಾಗಿ ಗುರುತಿಸಿಕೊಂಡಿರುವ ದಾಖಲೆಗಳ ಪಟ್ಟಿ:

| | | |
|---|---|---|
| ನಿಪಿ.1 | : | ಪ್ರಾಸಾ.1 ರವರ ದೂರು |
| ನಿಪಿ.1(ಎ) | : | ಪ್ರಾಸಾ.1 ರವರ ಸಹಿ |
| ನಿಪಿ.1(ಬಿ) | : | ಪ್ರಾಸಾ.4 ರವರ ಸಹಿ |
| ನಿಪಿ.1(ಸಿ) | : | ಪ್ರಾಸಾ.8 ರವರ ಸಹಿ |
| ನಿಪಿ.2 | : | ಕೃತ್ಯ ನಡೆದ ಸ್ಥಳದ ಪಂಚನಾಮೆ |
| ನಿಪಿ.2(ಎ) | : | ಪ್ರಾಸಾ.1 ರವರ ಸಹಿ |
| ನಿಪಿ.2(ಬಿ) | : | ಪ್ರಾಸಾ.9 ರವರ ಸಹಿ |
| ನಿಪಿ.2(ಸಿ) | : | ಪ್ರಾಸಾ.11 ರವರ ಸಹಿ |
| ನಿಪಿ.3 ಮತ್ತು 4 | : | ಫೋಟೋಗಳು |
| ನಿಪಿ.5 | : | ಪ್ರಾಸಾ.4 ರವರ ಹೇಳಿಕೆ |
| ನಿಪಿ.6 | : | ಪ್ರಾಸಾ.5 ರವರ ಹೇಳಿಕೆ |
| ನಿಪಿ.7 | : | ಪ್ರಾಸಾ.6 ರವರ ಹೇಳಿಕೆ |
| ನಿಪಿ.8 | : | ಪ್ರಾಸಾ.1 ರವರ ಗಾಯದ ಪ್ರಮಾಣ ಪತ್ರ |
| ನಿಪಿ.8(ಎ) | : | ಪ್ರಾಸಾ.7 ರವರ ಸಹಿ |
| ನಿಪಿ.8(ಬಿ) | : | ಪ್ರಾಸಾ.11 ರವರ ಸಹಿ |
| ನಿಪಿ.9 | : | ಪ್ರಥಮ ವರ್ತಮಾನ ವರದಿ |
| ನಿಪಿ.9(ಎ) | : | ಪ್ರಾಸಾ.8 ರವರ ಸಹಿ |
| ನಿಪಿ.10 | : | ಪಂಚರಿಗೆ ನೀಡಲಾದ ನೋಟಿಸ್ |
| ನಿಪಿ.10(ಎ) | : | ಪ್ರಾಸಾ.9 ರವರ ಸಹಿ |
| ನಿಪಿ.10(ಬಿ) | : | ಪ್ರಾಸಾ.10 ರವರ ಸಹಿ |

ನಿಪಿ.11 : ಕಚ್ಚಾ ನಕಾಶೆ
ನಿಪಿ.11(ಎ) : ಫ್ರಾಸಾ.9 ರವರ ಸಹಿ
ನಿಪಿ.11(ಬಿ) : ಫ್ರಾಸಾ.10 ರವರ ಸಹಿ

3. ಅಭಿಯೋಜನದವರ ಪರವಾಗಿ ಗುರುತಿಸಿಕೂಂಡಿರುವ ಮುದ್ದೆಮಾಲುಗಳ ಪಟ್ಟಿಃ

ಮು.ಮಾಲು. ನಂ.1 : ದೊಣ್ಣೆ
ಮು.ಮಾಲು. ನಂ.2 : ಕತ್ತಿ

4. ಆರೋಪಿಯವರ ಪರವಾಗಿ ವಿಚಾರಣೆಗೆ ಗುರಿಪಡಿಸಲಾದ ಸಾಕ್ಷದವರ ಪಟ್ಟಿಃ

ಇಲ್ಲ

5. ಆರೋಪಿಯವರ ಪರವಾಗಿ ಗುರುತಿಸಿಕೊಂಡಿರುವ ದಾಖಲೆಗಳ ಪಟ್ಟಿಃ

ಇಲ್ಲ

6. ಆರೋಪಿಯವರ ಪರವಾಗಿ ಗುರುತಿಸಿಕೊಂಡಿರುವ ಮುದ್ದೆಮಾಲುಗಳು ಪಟ್ಟಿಃ

ಇಲ್ಲ

**(ಮಾರುತಿ ಆರ್. ಶಿಂಧೆ)**
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
ಹೊಸನಗರ.